ರಾಜ್ಯದಲ್ಲಿ ಎಲ್ಲರಿಗೂ ಪ್ರಾಥಮಿಕ ಶಿಕ್ಷಣ.

726 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾಥಮಿಕ ಶಿಕ್ಷಣ ಎಲ್ಲರಿಗೂ ದೊರಕುವಂತಾಗಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ಈ ಬಗ್ಗೆ ಇದುವರೆಗೂ ಆಗಿರುವ ಪ್ರಗತಿ ಏನು ?

ಇ) ಅನಕ್ಷರತೆಯ ನಿವಾರಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಮರ್ಪಕವಾಗಿ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಕ್ರಿ.ಶ.2000ದ ವೇಳೆಗೆ ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಮಾಡಲು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಗುರಿಯನ್ನು ಹೊಂದಿದ್ದು ಈ ಕೆಳಕಂಡ ಹಲವಾರು ಸಂಘಟಿತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1) ಸಾರ್ವತ್ರಿಕ ಅವಕಾಶ :

ಪ್ರತಿ ಮಗು ತಾನು ನಡೆದು ಹೋಗುವಂತಹ ಸಮೀಪದ ಶಾಲಾ ಸೌಲಭ್ಯ. 300 ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ತೆಗೆಯಲಾಗುತ್ತಿದೆ.

2) ಸಾರ್ವತ್ರಿಕ ಭಾಗವಹಿಸುವಿಕೆ :

ಶಾಲಾ ವಯಸ್ಸಿನ ಪ್ರತಿ ಮಗುವು ದಾಖಲಾಗಿ ನಿಯಮಿತವಾಗಿ ಹಾಜರಾಗಿ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು.

3) ಸಾರ್ವತ್ರಿಕ ಸಾಧನೆ :

ಶಾಲೆಗೆ ಹಾಜರಾಗುವ ಪ್ರತಿ ಮಗುವು ಆಯಾ ಹಂತಕ್ಕೆ ನಿಗಧಿಪಡಿಸಿದ ಕಲಿಕಾ ಸಾಮರ್ಥ್ಯಗಳಿಸುವಂತೆ ಮಾಡುವುದು.

4) 1992-93 ರಲ್ಲಿ 74-90 ಲಕ್ಷ ಮಕ್ಕಳು ದಾಖಲಾಗಿದ್ದಾರೆ 1996-97ರಲ್ಲಿ 82-14 ಲಕ್ಷ ಮಕ್ಕಳು ದಾಖಲಾಗಿರುವರು. ದಾಖಲಾತಿ ಉತ್ತಮಗೊಳಿಸಲಾಗಿದೆ.

(1) ಶಾಲೆಯ ಮಕ್ಕಳಿಗೆ 1 ರಿಂದ 4ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರ I ರಿಂದ 7ನೇ ತರಗತಿಯ ಪರಿಶಿಷ್ಟ ಜಾತಿ : ವರ್ಗದ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರ ನೀಡಲಾಗುತ್ತಿದೆ.

(2) ಪರಿಶಿಷ್ಟ ಜಾತಿ/ವರ್ಗದ 1 ರಿಂದ 7ನೇ ತರಗತಿಯವರೆಗಿನ ಹೆಣ್ಣುಮಕ್ಕಳಿಗೆ ಉಚಿತ ಶಾಲಾ ಬ್ಯಾಗ್‌ನ್ನು (ಉತ್ತಮ ಗುಣಮಟ್ಟದ) ನೀಡಲಾಗುತ್ತಿದೆ.

(3) ಅಗತ್ಯವಿರುವ ಶಿಕ್ಷಕರ ಹುದ್ದೆ ಮಂಜೂರು ಮಾಡಿ ನೇಮಾಕಾತಿ ಮಾಡಲಾಗುತ್ತಿದೆ.

ಆ) (1) ಗ್ರಾಮೀಣ ಪ್ರದೇಶಗಳ ಹಿಂದುಳಿದ ಪ್ರತಿಭಾವಂತ ಮಕ್ಕಳಿಗಾಗಿ ಪ್ರತಿ ಜಿಲ್ಲೆ ಗೊಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ತೆರೆಯಲಾಗಿದೆ.

(2) 1996-97ನೇ ಸಾಲಿನಲ್ಲಿ 873 ಸರ್ಕಾರಿ ಪ್ರಾಥಮಿಕ ಶಾಲೆ ತೆರೆಯಲಾಗಿದೆ 978 ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಉನ್ನತೀಕರಿಸಲಾಗಿದೆ.

(3) 1993-94ರಿಂದ ಇದುವರೆಗೆ 24000 ಶಾಲಾ ಕೊಠಡಿ ನಿರ್ಮಾಣದ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಈ ವರ್ಷದಲ್ಲಿ ಈವರೆಗೆ 7120 ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸಿದೆ. ಶಾಲಾ ಕೊಠಡಿ ದುರಸ್ತಿ (ಅಗತ್ಯವಿರುವೆದೆ)ಗೊಳಿಸಲಾಗು ವುದು.

(4) ಪ್ರಾಥಮಿಕ ಶಾಲೆಗಳಿಗೆ ನೀರು ಮತ್ತು ಶೌಚಾಲಯ ಸೌಲಭ್ಯ ಒದಗಿಸಲು ಪ್ರತಿ ಶಾಲೆಗೆ 50,000.00 ಗಳಂತೆ ಒದಗಿಸಿ ಹಂತ ಹಂತವಾಗಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

(5) ಸರ್ಕಾರಿ ಶಾಲೆಗಳ ಪೀಠೋಪಕರಣ ಮತ್ತು ಕಲಿಕಾ ಭೋಧನಾ ಸಾಮಗ್ರಿ ಒದಗಿಸಲು 1995-96ನೇ ಸಾಲಿನ 5000 ಹಿರಿಯ ಪ್ರಾಥಮಿಕ ಶಾಲೆ ಹಾಗೂ 1996-97ರಲ್ಲಿ5000 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಾಮಗ್ರಿ ಒದಗಿಸಲಾಗಿದೆ.

(6)

1993-94	-	4.27 ಲಕ್ಷ
1994-95	-	4.72 ಲಕ್ಷ
1995-96	-	4.00 ಲಕ್ಷ
1996-97	-	3.50 ಲಕ್ಷ

ಶಾಲಾ ಮಧ್ಯೆದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಪುನರ್ ಶಾಲಾ ವ್ಯಾಪ್ತಿಗೆ ತರಲಾಗಿದೆ.

(7)

1992-93	-	74.90 ಲಕ್ಷ
1993-94	-	77.33 ಲಕ್ಷ
1994-95	-	78.51 ಲಕ್ಷ
1995-96	-	78.67 ಲಕ್ಷ
1996-97	-	82.14 ಲಕ್ಷ

1 ರಿಂದ 7ನೇ ತರಗತಿಯವರೆಗೆ ಮಕ್ಕಳು ಶಾಲೆಗೆ ದಾಖಲಾಗಿರುತ್ತಾರೆ.

(8) 1993-94 ರಿಂದ 1996-97ರವರಗೆ ಪ್ರತಿ ವರ್ಷ 5000 ಪ್ರಾಥಮಿಕ ಶಾಲಾ ಶಿಕ್ಷಕರಂತೆ ಒಟ್ಟು 20000 ಶಿಕ್ಷಕರ ಹುದ್ದೆ ಮಂಜೂರು ಮಾಡಿದೆ.

ಕಪ್ಪುಹಲಗೆ ಕಾರ್ಯ ಯೋಜನೆಯಡಿ 12709 ಹುದ್ದೆಗಳು ಮಂಜೂರಾಗಿವೆ.

(9)

1992-93 ರಲ್ಲಿ	-	6811
1993-94 ರಲ್ಲಿ	-	6812
1994-95 ರಲ್ಲಿ	-	16863
1995-96 ರಲ್ಲಿ	-	8527
1996-97 ರಲ್ಲಿ	-	17997

ಪ್ರಾಥಮಿಕ ಶಿಕ್ಷಕರ ನೇಮಕ ಮಾಡಲಾಗಿದೆ. ಎಲ್ಲಾ ಏಕೋಪಾಧ್ಯಾಯ ಶಾಲೆಗಳನ್ನು ಬಹು ಉಪಾಧ್ಯಾಯ ಶಾಲೆಗಳಾಗಿ ಪರಿವರ್ತಿಸಲಾಗುತ್ತಿದೆ.

ವಿಸ್ತೃತ ಕಪ್ಪುಹಲಗೆ ಕಾರ್ಯ ಯೋಜನೆಯಡಿ 1996-1997ನೇ ಸಾಲಿನಲ್ಲಿ 9513 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಲಿಕಾ ಬೋದನೋಪಕರಣ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಅನಕ್ಷರತೆ ನಿವಾರಣೆಗೆ ಎಲ್ಲಾ ಜಿಲ್ಲೆಗಳಲ್ಲಿ ಸಾಕ್ಷರತಾ ಆಂದೋಲನ ಹಾಗೂ ಸಾಕ್ಷರೋತ್ತರ ಹಾಗೂ ಮುಂದುವರಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ಹೌದು.

ರಾಜ್ಯದಲ್ಲಿ ಶಿಶುಗಳ ಮರಣ ತಡೆಗಟ್ಟುವಿಕೆ :

727 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಶಿಶುಗಳ ಮರಣ ಸಂಖ್ಯೆ ಜಾಸ್ತಿ ಆಗಿರುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಆ) ರಾಜ್ಯದಲ್ಲಿರುವ ಸೆಕೆಂಡರಿ ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವಸಲುವಾಗಿ ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು ?

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇತ್ತೀಚಿನ ಸಮೀಕ್ಷೆಯಂತೆ (1995) ರಾಷ್ಟ್ರೀಯ ಮಟ್ಟದ ಶಿಶು ಮರಣ ದರ 74ಕ್ಕೆ ಹೋಲಿಸಿದಾಗ ಕರ್ನಾಟಕ ರಾಜ್ಯದ ಶಿಶು ಮರಣ ದರ 62 ಇದೆ ಎಂದು ತಿಳಿದು ಬಂದಿದೆ. ಈ ದರ ಪ್ರತಿ ವರ್ಷವೂ ಕಡಿಮೆಯಾಗುತ್ತಿರುವುದು ಕಂಡು ಬಂದಿದೆ. ರಾಜ್ಯದಲ್ಲಿ ಇನ್ನೂ ಶಿಶು ಮರಣ ದರ